ದೂರವಾಣಿ/ಫ್ಯಾಕ್ಸ್ : 2752 6208
ವೆಬ್‌ಸೈಟ್ : www.kanakapura-pa.in

# ಕನಕಪುರ ಯೋಜನಾ ಪ್ರಾಧಿಕಾರ

ಕನಕಪುರ - 562 117

ಸಂಖ್ಯೆ:ಕಯೋಪ್ರಾ/ಪ್ರಾಪ್ರಪತ್ರ/ಸಿಸಿ/302/2013-14/592 ದಿನಾಂಕ: 25 JAN 2014

## ಪ್ರಾರಂಭಿಕ ಪ್ರಮಾಣ ಪತ್ರ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರನ್ವಯ)
(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳು 1965 ರ ನಿಯಮ 30 ನಮೂನೆ 3 ರನ್ವಯ)

**ವಿಷಯ :** **ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲಿಪುರ ಗ್ರಾಮದ ಸರ್ವೆ ನಂ. 114 (ಪಿ) ರಲ್ಲಿ (16ಗು), 119/1 ರಲ್ಲಿ (2ಎ–27ಗು), 119/2 ರಲ್ಲಿ (2ಎ–35ಗು), 120 ರಲ್ಲಿ (5ಎ–26ಗು), 121/1 ರಲ್ಲಿ (1ಎ–37ಗು), 121/2 ರಲ್ಲಿ (9ಗು), 121/3 ರಲ್ಲಿ (3ಎ–19ಗು), 121/4 ರಲ್ಲಿ (1ಎ), 122 ರಲ್ಲಿ (4ಎ–06ಗು), 123ರಲ್ಲಿ (1ಎ–22ಗು), 124/2 ರಲ್ಲಿ (4ಗು), 124/3 ರಲ್ಲಿ (38ಗು), 124/4 ರಲ್ಲಿ (38ಗು), 124/5 ರಲ್ಲಿ (29ಗು), 124/6 ರಲ್ಲಿ (16ಗು), 124/7 ರಲ್ಲಿ (14ಗು), 124/8 ರಲ್ಲಿ (10ಗು), 124/9 ರಲ್ಲಿ (10ಗು), 125/1 ರಲ್ಲಿ (3ಎ–30ಗು), 125/2 ರಲ್ಲಿ (1ಎ–20ಗು), 125/3 ರಲ್ಲಿ (26ಗು), 125/4 ರಲ್ಲಿ (12ಗು), 126/1 ರಲ್ಲಿ (1ಎ–35ಗು), 126/2/3/4 ರಲ್ಲಿ (3ಎ–05ಗು), 127/1 ರಲ್ಲಿ (1ಎ–04ಗು), 127/4ಪಿ ರಲ್ಲಿ (04ಗು), 127/5 ರಲ್ಲಿ (08ಗು), 137 ರಲ್ಲಿ (23ಗು),138 ರಲ್ಲಿ (33ಗು), 139 ರಲ್ಲಿ (1ಎ–09ಗು), 140 ರಲ್ಲಿ (18ಗು), 141 ರಲ್ಲಿ (1ಎ–24ಗು), 142 ರಲ್ಲಿ (2ಎ–04ಗು), 144 ರಲ್ಲಿ (1ಎ–32½ಗು), 145 ರಲ್ಲಿ (1ಎ–31ಗು), 146 ರಲ್ಲಿ (1ಎ–15ಗು), 147 ರಲ್ಲಿ (23ಗು), 148/2/3 ರಲ್ಲಿ (1ಎ–13ಗು) ಮತ್ತು 149 ರಲ್ಲಿ (2ಎ), ಒಟ್ಟು 56ಎಕರೆ 05½ ಗುಂಟೆ** ವಿಸ್ತೀರ್ಣದಲ್ಲಿ ಅನುಮೋದನೆಯಾಗಿರುವ ಅಭಿವೃದ್ಧಿ ನಕ್ಷೆಯಲ್ಲಿನ ಕಗ್ಗಲೀಪುರ ಗ್ರಾಮ ಪಂಚಾಯತಿಯ ಖಾತಾ ನಂ. 1293/1, 1293/2 ಮತ್ತು 1293/3 ಗಳಲ್ಲಿ ವಸತಿ ಉಪಯೋಗದ ಬಿಲ್ಡಿಂಗ್ '33ಎ & 33ಬಿ', 'ಬಿಲ್ಡಿಂಗ್ ನಂ 35ಎ ಮತ್ತು 35ಬಿ' ರಲ್ಲಿ ವಸತಿ ಉಪಯೋಗದ ಅಪಾರ್ಟಮೆಂಟ್ಸ್ ಹಾಗೂ ಅಸೋಸಿಯಷೆನ್ ಮತ್ತು ಶಾಲೆ (ಪ್ಲೇ ಹೋಮ್) ಗಳಿಗೆ ಮೀಸಲಿಟ್ಟಿರುವ ಪ್ರದೇಶಗಳಿಲ್ಲಿ ಕಟ್ಟಡಗಳನ್ನು ಕಟ್ಟಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ

**ಉಲ್ಲೇಖ :** 1) ನಿಮ್ಮ ಮನವಿ ಪತ್ರ ದಿನಾಂಕ : 20.01.2014
2) ಈ ಕಛೇರಿ ಪತ್ರ ಸಂಖ್ಯೆ:ಕಯೋಪ್ರಾ:ಎಲ್ಎಒ:15:2009-10/557 ದಿನಾಂಕ: 08.01.2014.
3) ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ದಿನಾಂಕ: 24.01.2014

*******

ವಿಷಯಕ್ಕೆ ಸಂಬಂಧಿಸಿದಂತೆ ಮೆ: ಬ್ರಿಗೇಡ್ ಎಂಟರ್ ಪ್ರೈಸೆಸ್ ಲಿಮಿಟಡ್ , ಬೆಂಗಳೂರು ಇವರು ಉಲ್ಲೇಖ(1) ರ ಪತ್ರದಲ್ಲಿ **ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲಿಪುರ ಗ್ರಾಮದ ಸರ್ವೆ ನಂ. 114 (ಪಿ) ರಲ್ಲಿ (16ಗು), 119/1 ರಲ್ಲಿ (2ಎ–27ಗು), 119/2 ರಲ್ಲಿ (2ಎ–35ಗು), 120 ರಲ್ಲಿ (5ಎ–26ಗು), 121/1 ರಲ್ಲಿ (1ಎ–37ಗು), 121/2 ರಲ್ಲಿ (9ಗು), 121/3 ರಲ್ಲಿ (3ಎ–19ಗು), 121/4 ರಲ್ಲಿ (1ಎ), 122 ರಲ್ಲಿ (4ಎ–06ಗು), 123ರಲ್ಲಿ (1ಎ–22ಗು), 124/2 ರಲ್ಲಿ (4ಗು), 124/3 ರಲ್ಲಿ (38ಗು), 124/4 ರಲ್ಲಿ (38ಗು), 124/5 ರಲ್ಲಿ (29ಗು), 124/6 ರಲ್ಲಿ (16ಗು), 124/7 ರಲ್ಲಿ (14ಗು), 124/8 ರಲ್ಲಿ (10ಗು), 124/9 ರಲ್ಲಿ (10ಗು), 125/1 ರಲ್ಲಿ (3ಎ–30ಗು), 125/2 ರಲ್ಲಿ (1ಎ–20ಗು), 125/3 ರಲ್ಲಿ (26ಗು), 125/4 ರಲ್ಲಿ (12ಗು), 126/1 ರಲ್ಲಿ (1ಎ–35ಗು), 126/2/3/4 ರಲ್ಲಿ (3ಎ–05ಗು), 127/1 ರಲ್ಲಿ (1ಎ–04ಗು), 127/4ಪಿ ರಲ್ಲಿ (04ಗು), 127/5 ರಲ್ಲಿ (08ಗು), 137 ರಲ್ಲಿ (23ಗು),138 ರಲ್ಲಿ (33ಗು), 139 ರಲ್ಲಿ (1ಎ–09ಗು), 140 ರಲ್ಲಿ (18ಗು), 141 ರಲ್ಲಿ (1ಎ–24ಗು), 142 ರಲ್ಲಿ (2ಎ–04ಗು), 144 ರಲ್ಲಿ (1ಎ–32½ಗು), 145 ರಲ್ಲಿ (1ಎ–31ಗು), 146 ರಲ್ಲಿ (1ಎ–15ಗು), 147 ರಲ್ಲಿ (23ಗು), 148/2/3 ರಲ್ಲಿ (1ಎ–13ಗು) ಮತ್ತು 149 ರಲ್ಲಿ (2ಎ), ಒಟ್ಟು 56ಎಕರೆ 05½ ಗುಂಟೆ** ವಿಸ್ತೀರ್ಣದಲ್ಲಿ ಅನುಮೋದನೆಯಾಗಿರುವ ಅಭಿವೃದ್ಧಿ ನಕ್ಷೆಯಲ್ಲಿನ ಕಗ್ಗಲೀಪುರ ಗ್ರಾಮ ಪಂಚಾಯ್ತಿಯ ಖಾತಾ ನಂ. 1293/1, 1293/2 ಮತ್ತು 1293/3 ಗಳಲ್ಲಿ ವಸತಿ ಉಪಯೋಗದ ಬಿಲ್ಡಿಂಗ್ '33ಎ & 33ಬಿ', ಬಿಲ್ಡಿಂಗ್ ನಂ '35ಎ ಮತ್ತು 35ಬಿ' ರಲ್ಲಿ ವಸತಿ ಉಪಯೋಗದ ಅಪಾರ್ಟಮೆಂಟ್ಸ್ ಹಾಗೂ ಅಸೋಸಿಯಷೆನ್ ಮತ್ತು ಶಾಲೆ (ಪ್ಲೇ ಹೋಮ್) ಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುತ್ತಾರೆ. ಪ್ರಸ್ತಾವಿತ ಜಮೀನಿಗೆ ಪ್ರಾಧಿಕಾರದಿಂದ ಈಗಾಗಲೇ ಉಲ್ಲೇಖ(2)ರ ಪತ್ರದಲ್ಲಿ ವಸತಿ ಉದ್ದೇಶದ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲಾಗಿದೆ. ಹಾಗೂ ಅರ್ಜಿದಾರರು ಉಲ್ಲೇಖ(3)ರಲ್ಲಿ ಶುಲ್ಕಗಳನ್ನು ಪಾವತಿಸಿರುತ್ತಾರೆ. ಹಾಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷೆನ್ 15(1)ರನ್ವಯ ವಸತಿ ಸಮೂಚ್ಚಯ (Apartment) ಕಟ್ಟಡ ಕಟ್ಟಲು ಮೆ: ಬ್ರಿಗೇಡ್ ಎಂಟರ್ ಪ್ರೈಸೆಸ್ ಲಿಮಿಟಡ್ ಬೆಂಗಳೂರು ಇವರಿಗೆ ಈ ಕೆಳಕಂಡ ಷರತ್ತುಗೊಳಪಟ್ಟು ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

## ಷರತ್ತುಗಳು

1. ಮೇಲ್ಕಂಡ ನಿವೇಶನದಲ್ಲಿ ಕಟ್ಟುವ ಕಟ್ಟಡಗಳನ್ನು ಈ ಕಛೇರಿಯಿಂದ ಅನುಮತಿ ನೀಡಿರುವಂತೆ ವಸತಿ ಉಪಯೋಗಕ್ಕೆ ಮಾತ್ರ ಉಪಯೋಗಿಸತಕ್ಕದ್ದು ಮತ್ತು ಕಟ್ಟಡಗಳನ್ನು ಅನುಮೋದಿತ ನಕ್ಷೆಯಂತೆ ನಡುಜಾಗವನ್ನು ಬಿಟ್ಟು ಕಟ್ಟಡ ಕಟ್ಟತಕ್ಕದ್ದು.
2. ಪ್ರಸ್ತಾವಿತ ನಿವೇಶನದಲ್ಲಿ ಕಟ್ಟಡಗಳ ಕೆಲಸ ಪೂರ್ಣಗೊಂಡ ನಂತರ ಈ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆಯತಕ್ಕದ್ದು.
3. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಎದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಆಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು ಕಗ್ಗಲೀಪುರ ಗ್ರಾಮ ಪಂಚಾಯ್ತಿಯಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.
4. ಕಟ್ಟಡಗಳ ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದಲ್ಲ.
5. ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿಗಳು ಹಾಗೂ ಕಟ್ಟಡದ ವಿಧಿಯ ಪ್ರಕಾರ ಕಟ್ಟಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನ ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯ ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.
6. ಈ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅನುಮೋದನೆ ನೀಡಿದ ದಿನಾಂಕದಿಂದ ಎರಡು ವರ್ಷದವರೆಗೆ ಮಾತ್ರ ಮಾನ್ಯತೆ ನೀಡಲಾಗಿದೆ. ಈ ಅವಧಿ ಮುಗಿದ ನಂತರ ಪ್ರಾರಂಭಿಕ ಪ್ರಮಾಣ ಪತ್ರವನ್ನು ನವೀಕರಿಸಿಕೊಳ್ಳದೆ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಹಾಗೂ ಮುಂದುವರೆಸಬಾರದು.
7. ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಮತ್ತು ಏನಾದರೂ ಬದಲಾವಣೆ ಗಳು ಅವಶ್ಯವಿದ್ದಲ್ಲಿ ಕಟ್ಟಡ ನಿರ್ಮಾಣಕ್ಕೆ ಮುಂಚೆ ಮಾರ್ಪಾಡಿತ ಕಟ್ಟಡ ನಕ್ಷೆಗೆ ಅನುಮೋದನೆ ಪಡೆದು ಮುಂದುವರೆಸತಕ್ಕದ್ದು.
8. ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರಾಗುವುದಿಲ್ಲ.
9. ಕಟ್ಟಡ ಭದ್ರತೆಯ ಕುರಿತು ನುರಿತ (Strctural Engineer) ತಜ್ಞರಿಂದ Strctural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.
10. ಪ್ರಸ್ತಾವನೆ ಸಂಬಂಧ Hindustan Aeronautics Limited, Banglore ಇವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ ASM/CM(AO)/181/HAL-BG-174/2012 ದಿನಾಂಕ: 03.08.2012 ರಲ್ಲಿ ವಿಧಿಸಿಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
11. ಪ್ರಸ್ತಾವನೆ ಸಂಬಂಧ ಬೆಸ್‌ಕಾಂ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: CEE/BMAZ/SEE(O)/AEE.4/F-148/6788-91 ದಿನಾಂಕ 24.11.2012 ರಲ್ಲಿ ವಿಧಿಸಿಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
12. ಪ್ರಸ್ತಾವನೆ ಸಂಬಂಧ ಬಿಎಸ್‌ಎನ್‌ಎಲ್ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: DE/MWS/BG/S-/11/VOLIX/6 ದಿನಾಂಕ 03.08.2012 ರಲ್ಲಿ ವಿಧಿಸಿಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
13. ಪ್ರಸ್ತಾವನೆ ಸಂಬಂಧ State level Environmental Impact AssesSment Autority, Karnataka ಇವರ ಪತ್ರ ಸಂಖ್ಯೆ : SEIAA:46:CON:2010 ದಿನಾಂಕ 16.09.2011 ರಲ್ಲಿ ವಿಧಿಸಿಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
14. ಪ್ರಸ್ತಾವನೆ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: PCB/237/CNP/11/H886 ದಿನಾಂಕ: 25.11.2011 ರಲ್ಲಿ ವಿಧಿಸಿಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

ದೂರವಾಣಿ / ಫ್ಯಾಕ್ಸ್ : 2752 6208
ವೆಬ್‌ಸೈಟ್ : www.kanakapura-pa.in

# ಕನಕಪುರ ಯೋಜನಾ ಪ್ರಾಧಿಕಾರ

ಕನಕಪುರ - 562 117

15. ಪ್ರಸ್ತಾವನೆ ಸಂಬಂಧ Office of the Director General Karnataka State Fire & Emergency Services ರವರ ಪತ್ರ ಸಂಖ್ಯೆ : GBC(1)522/2012 ದಿನಾಂಕ: 20.05.2013 ರಲ್ಲಿ ವಿಧಿಸಿಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
16. ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
17. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಸ್ತೆಯಲ್ಲಿ ಶೇಖರಣೆ ಮಾಡಬಾರದು, ಈ ಬಗ್ಗೆ ಕಂಡು ಬಂದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದುಪಡಿಸಲಾಗುವುದು.
18. ಕಟ್ಟಡ ಜಾಗ ಹೊರತುಪಡಿಸಿ ಉಳಿದ ಸೂಕ್ತ ಪ್ರದೇಶದಲ್ಲಿ ಹಾಲಿ ಇರುವ ಮರಗಳನ್ನು ಉಳಿಸಿಕೊಂಡು ಹೊಸದಾಗಿ ಮರ/ಗಿಡಗಳನ್ನು ಬೆಳೆಸತಕ್ಕದ್ದು.
19. ಸದರಿ ಕಟ್ಟಡಗಳಿಗೆ ಬೇಕಾಗುವ ನೀರು, ವಿದ್ಯುತ್, ಕಸ ವಿಲೇವಾರಿ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಕಡ್ಡಾಯವಾಗಿ ನಿಯಮಾವಳಿಯಂತೆ ಅಳವಡಿಸತಕ್ಕದ್ದು.
20. ನಿವೇಶನದ ಆವರಣದೊಳಗೆ ಮಳೆ ನೀರು ಕೊಯ್ಲನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳತಕ್ಕದ್ದು.
21. ವಸತಿ ಬಡಾವಣೆಯಲ್ಲಿ ಕಟ್ಟಡಗಳ ನಿರ್ಮಾಣ ಸಂಬಂಧ ಸರ್ಕಾರದ ವಿವಿಧ ಇಲಾಖೆಗಳು ವಿಧಿಸುವ ಷರತ್ತು ಹಾಗೂ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
22. ಸೋಲಾರ್ ವಾಟರ್ ಹೀಟರ್‌ನ್ನು ಕಟ್ಟಡದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
23. ಹಾಲಿ ಇರುವ ರಸ್ತೆ / ರಾಜ್ಯ ಹೆದ್ದಾರಿ / ರಾಷ್ಟ್ರೀಯ ಹೆದ್ದಾರಿಯ ಮಧ್ಯ ಭಾಗದಿಂದ ನಿಯಮಾಳಿಯಂತೆ ಜಾಗವನ್ನು ಬಿಟ್ಟು ಕಟ್ಟ ತಕ್ಕದ್ದು. ಮತ್ತು ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.
24. ಈ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ನೀವು ಬದ್ಧರಾಗಿರತಕ್ಕದ್ದು.
25. ಈ ಕಟ್ಟಡ ನಕ್ಷೆ ಮಂಜೂರಾತಿ ಪಡೆಯಲು ನೀವು ತಪ್ಪು ಮಾಹಿತಿ/ ದಾಖಲೆಗಳನ್ನು ನೀಡಿರುವುದು ಕಂಡು ಬಂದರೆ ಈ ಮಂಜೂರಾತಿ ಆದೇಶವು ಸ್ವಯಂ ರದ್ದಾಗುತ್ತದೆಂದು ತಿಳಿಯತಕ್ಕದ್ದು.
26. ಸರ್ಕಾರವು ನಿಗಧಿಪಡಿಸುವ ಇತರೆ ಯಾವುದೇ ಶುಲ್ಕಗಳನ್ನು ಸಂಸ್ಥೆಯವರೇ ಪಾವತಿಸತಕ್ಕದ್ದು.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(4) ರಂತೆ ಕ್ರಮ ಕೈಗೊಳ್ಳಲಾಗುವುದು.

ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ ಸದಸ್ಯ ಕಾರ್ಯದರ್ಶಿ,
ಕನಕಪುರ ಯೋಜನಾ ಪ್ರಾಧಿಕಾರ
ಕನಕಪುರ.

ಇವರಿಗೆ,
ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು,
ಕಗ್ಗಲಿಪುರ ಗ್ರಾಮ ಪಂಚಾಯಿತಿ,
ಕಗ್ಗಲಿಪುರ.

ಕಟ್ಟಡ ನಕ್ಷೆಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಗಿದೆ.

ಪ್ರತಿಯನ್ನು:-

ಮೆ: ಬ್ರಿಗೇಡ್ ಎಂಟರ್ ಪ್ರೈಸೆಸ್ ಲಿಮಿಟೆಡ್, ಮಲ್ಲೇಶ್ವರಂ, ಬೆಂಗಳೂರು-55 ಇವರ ಮಾಹಿತಿಗಾಗಿ